ಶ್ರೀ ವಾಟಾಳ್ ನಾಗರಾಜ್ : ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಉಪಾಧ್ಯಕ್ಷರೇ ಈ ಬಾರಿ ಮಾನ್ಯ ಮುಖ್ಯಮಂತ್ರಿಗಳು ತಂದಿರತಕ್ಕಂತಹ .....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಅತ್ಯಂತ ವಿಷಾದದಿಂದ ನಾನು ಈ ಸಭೆಯನ್ನು ತ್ಯಾಗಮಾಡಿ ಹೊರಗೆ ಹೋಗುತ್ತಿದ್ದೇನೆ. ಪ್ರಾಮಾಣಿಕವಾಗಿ ಮಾತನಾಡತಕ್ಕಂತಹವರಿಗೆ ಮಧ್ಯೆ ಅಡ್ಡಿಪಡಿಸಿದರೆ ರಕ್ಷಣೆ ಕೊಡತಕ್ಕಂಥಾದ್ದು ಸರಿಯಲ್ಲವೆಂದು ಹೇಳಿ ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಸದನದಲ್ಲಿ ಆಸಕ್ತಿಯಿಂದ ಚರ್ಚೆಯಲ್ಲಿ ಭಾಗವಹಿಸಿ ಸರಕಾರದ ಕೆಲಸದ ಬಗ್ಗೆ ಸ್ವಲ್ಪ ಟೀಕೆ ಮಾಡತಕ್ಕಂತಹ ಸದಸ್ಯರು ಬಡ್ಜೆಟ್ ಬಗ್ಗೆ ಮಾತನಾಡುವಾಗ 10 ನಿಮಿಷ ಹೆಚ್ಚಿಗೆ ತೆಗೆದುಕೊಂಡರೆ ಅಂತಹ ಸಂದರ್ಭದಲ್ಲಿ ಏನೂ ಆಗುವುದಿಲ್ಲ. ಎಷ್ಟು ಜನ ಅದರ ಬಗ್ಗೆ ಆಸಕ್ತಿ ವಹಿಸಿ ಕೆಲಸ ಮಾಡುತ್ತಿಲ್ಲ. ವಿಷಯಗಳನ್ನು ಓದಿ ಸಂಗ್ರಹಣೆ ಮಾಡಿ ಹೇಳುತ್ತಿದ್ದಾರೆ. ಅವರು ಹೇಳತಕ್ಕಂತಹ ಶೈಲಿ ಕೆಲವರಿಗೆ ಹಿಡಿಸದೇ ಇರಬಹುದು. ಈ ಸಭೆಗೆ ಅಗೌರವ ತರತಕ್ಕಂತಹ ವಿಚಾರವಿದ್ದರೆ ಅದನ್ನು ಕಡತದಿಂದ ತೆಗೆದುಹಾಕತಕ್ಕಂತಹ ಹಕ್ಕು ನಮಗೆ ಇದೆ. 4-5 ಬಾರಿ ಅವರು ವಿಧಾನಸಭೆಗೆ ಗೆದ್ದು ಬಂದಿದ್ದಾರೆ. ಅವರಿಗೆ ಅಪಾರವಾದ ಅನುಭವ ಇದೆ. ಅವರಿಗೆ ತಾವು ಅವಕಾಶ ಕೊಡಬೇಕು.

ಉಪಾಧ್ಯಕ್ಷರು : ನಾನು ಏನು ಹೇಳಿದೆ ಎಂದರೆ ಇನ್ನು 5 ನಿಮಿಷದಲ್ಲಿ ಮುಗಿಸಿ ಎಂದು ಹೇಳಿದೆ ಅಷ್ಟೆ. ಬನ್ನಿಕೋಡ್‌ರವರು ಹಾಗೂ ಇನ್ನೂ ಕೆಲವರು ಮಾತನಾಡಬೇಕೆಂದಿದ್ದಾರೆ. ಈ ಕಡೆ ಯಾರು ಮಾತನಾಡುತ್ತಾರೋ ಗೊತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹೊಸ ಸದಸ್ಯರಿಗೆ ಅವಕಾಶ ಮಾಡಿಕೊಡಬೇಕು. ಇಲ್ಲವೆಂದು ಹೇಳುವುದಿಲ್ಲ. ಎಲ್ಲರಿಗೂ ಮಾತನಾಡಲು ಅವಕಾಶ ಕೊಡಬೇಕು. ಬನ್ನಿಕೋಡ್‌ರವರಿಗೆ ಸಮಯ ನೀಡಬಾರದೆಂದು ಯಾರೂ ಹೇಳುವುದಿಲ್ಲ. ವಾಟಾಳ್ ನಾಗರಾಜ್‌ರವರನ್ನು ಕರೆಯಿಸಿ ಅವರಿಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಿ. ಅವರು ಇನ್ನೂ ಪೂರ್ತಿ ಮಾಡಿಲ್ಲ.

ಶ್ರೀ ಬನ್ನಿಕೋಡ್ ಹೆಚ್. ಬಸಪ್ಪ : ಎಲ್ಲರಿಗೂ ಸಮಯವನ್ನು ಹಂಚಿಕೊಡಿ.

ಉಪಾಧ್ಯಕ್ಷರು : ಅವರು ಹೊರಗೆ ಹೋಗಿದ್ದಾರೆ. ಇಲ್ಲ ಆಯಿತು. ಶ್ರೀ ಇದಿನಬ್ಬನವರು ನಿಂತಿದ್ದಾರೆ. ಅವರು ಮಾತನಾಡಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರು ವಾಪಸ್ಸು ಬಂದಮೇಲೆ ಅವಕಾಶ ಕೊಡಿ.

ಉಪಾಧ್ಯಕ್ಷರು : ಆಯಿತು.

+ ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕ ಆಯವ್ಯಯಪತ್ರವನ್ನು ನಾನು ಸಂಪೂರ್ಣವಾಗಿ ಸ್ವಾಗತಿಸಿ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಎಲ್ಲಾ ವಿಚಾರಗಳನ್ನು ಹೇಳುವುದಕ್ಕೆ ಅವಕಾಶವಿಲ್ಲ. ಆದರೂ ಕೂಡ ಕಂಡುಕೊಂಡಂತಹ ವಿಚಾರ .....

ಉಪಾಧ್ಯಕ್ಷರು : ಮಾನ್ಯ ಸದಸ್ಯರಾದ ಇದಿನಬ್ಬರವರೇ, ತಾವು ಆದಷ್ಟು ಬೇಗ 10-15 ನಿಮಿಷಗಳಲ್ಲಿ ತಮ್ಮ ಭಾಷಣ ಮುಗಿಸಿದರೆ ಇನ್ನು ಮೂರ್ನಾಲ್ಕು ಜನಗಳಿಗೆ ಮಾತನಾಡಲಿಕ್ಕೆ ಅವಕಾಶ ಕೊಡಬಹುದು.